# ಅಲ್ಲೊಂದು ಅಂಗಡಿ

■ ಪ್ರೇಮಾ ಭಟ್

ಆ ದಾರಿಯಲ್ಲಿ ನಾಲ್ಕು ಹೆಜ್ಜೆ ಹೋದರೆ ಅಲ್ಲೊಂದು ಅಂಗಡಿ ಸಿಗುತ್ತದೆ. ಅಂಗಡಿ ಚಿಕ್ಕದೊಂದು ಜೋಪಡಿಯ ಹಾಗಿದೆ. ಹಿಂಭಾಗದ ಮನೆಗೆ ತಾಗಿಕೊಂಡಂತೆ ಎರಡು ಬದಿಗೆ ಕಟ್ಟಿದ ತುಂಡು ಗೋಡೆ. ಒಂದೂವರೆ ಅಡಿ ಅಗಲ, ಆರಡಿ ಉದ್ದದ ಅಂಗಡಿ. ಒಳಗೆ ಕೂರಲು ಜಾಗ ಎಲ್ಲಿದೆ?. ಕುಸುಮಿ ಹರಕಲು ಗೋಣಿ ತಾಟು ಹಾಸಿಕೊಂಡು ಎದುರಿಗೆ ಪುಟ್‌ಪಾತಿಗೆ ಹೊದೆಸಿದ ಚಪ್ಪಡಿ ಕಲ್ಲಿನ ಮೇಲೆ ಕೂರುತ್ತಾಳೆ. ಬರುವ ಗಿರಾಕಿಗಳಿಗೆ ಕೂತಲ್ಲಿಂದಲೇ ಕೈಗೆ ಸಿಗುವ ವಸ್ತುಗಳನ್ನು ತೆಗೆದುಕೊಟ್ಟು ದುಡ್ಡು ಗೋಣಿ ತಾಟಿನ ಕೆಳಗೆ ಹಾಕುತ್ತಾಳೆ. ಸಿಗದಿದ್ದಾಗ ಮಾತ್ರ ಎದ್ದು ಪರದಾಡುತ್ತಾ ಹುಡುಕಿ ತೆಗೆದು ಕೊಡುತ್ತಿದ್ದಳು. ಮೊದ ಮೊದಲು ಹಾಗೆ ಅಮೇಲೆ ಹುಡುಕುವುದೇ ಬೇಕಿರಲಿಲ್ಲ. ಎಲ್ಲಿಟ್ಟರೂ ಸಿಕ್ಕಿ ಬಿಡುತಿತ್ತು. ಆ ಸಣ್ಣ ಅಂಗಡಿ ಬಿಟ್ಟರೆ ಜೀವನಕ್ಕೆ ಬೇರೇನಿದೆ ದಾರಿ? ಮಳೆ ಬಂದಾಗ ನೆಂದು ನೆಂದು ಸೊರಗುವುದನ್ನು ನಾನು ನೋಡುತ್ತಿದ್ದೆ. ಬಿಸಿಲ ಝಳಕ್ಕೆ ಕೂರಲಾರದೆ ಬೆವರೊರೆಸಿಕೊಳ್ಳುವುದನ್ನು, ಕ್ಷಣಕ್ಷಣಕ್ಕೂ ನೀರು ಕುಡಿಯುವುದನ್ನು ನೋಡಿದ್ದೂ ಉಂಟು, ಚಳಿಗಾಲದಲ್ಲಿ ಮಾತ್ರ ಕರ್‍ರನೆಯ ಕಂಬಳಿಯನ್ನು ಹೊದ್ದು ಬರುವುದನ್ನು ಕಂಡಿದ್ದೆ. ಅದು ಅವಳಿಗೆ ಬೆಚ್ಚನೆಯ ಸುಖವನ್ನು ಕೊಡುತ್ತಿತ್ತು.

ಪಡಪೋಷಿ ಎನಿಸುವ ಆ ಅಂಗಡಿಗೆ ಬಾಡಿಗೆ ಸಾವಿರ ರೂಪಾಯಿ, ಅದ್ಯಾವ ಸೀಮೆ ಲೆಕ್ಕವೋ ಏನೋ, ಅಂಗಡಿಗೆ ತಾಗಿಕೊಂಡಿರುವ ಮನೆಯವರಿಗೆ ಕೊಡಬೇಕಾದ ನೆಲ ಬಾಡಿಗೆ ಅದು. ಆ ನೆಲ ಬಿಟ್ಟರೆ ಬೇರೆಲ್ಲೂ ಅಂಗಡಿ ಸಿಗುವ ಹಾಗಿಲ್ಲ. ಮನೆಗೆ ತಾಗಿದಂತೆ ಎರಡು ಬದಿಗೆ ತುಂಡು ಗೋಡೆ ಏರಿಸಿ ಮೇಲೆ ಎರಡಡಿ ಅಗಲ ಆರಡಿ

